11	Chikkaballapura	60,183	3,009,150
12	Dakshina Kannada	32,810	1,640,500
13	Davangere	135,354	6,767,700
14	Dharwad	187,662	9,383,100
15	Gadag	78,558	3,927,900
16	Gulbarga	273,130	13,656,500
17	Haveri	99,642	4,982,100
18	Hassan	84,551	4,227,550
19	Kodagu	25,191	1,259,550
20	Kolar	89,435	4,471,750
21	Koppal	107,675	5,383,750
22	Mandya	101,024	5,051,200
23	Mysore	146,544	7,327,200
24	Ramanagar	58,118	2,905,900
25	Raichur	125,579	6,278,950
26	Shimoga	85,557	4,277,850
27	Tumkur	163,961	8,198,050
28	Udupi	18,750	937,500
29	Uttara Kannada	76,722	3,836,100
	Grand Total	**3,286,804**	**164,340,200**

F.C.S 37 D.R.A 2009

ಕರ್ನಾಟಕ ವಿಧಾನ ಸಭೆ

134 ಶ್ರೀ ಬಾಲಕೃಷ್ಣ. ಹೆಚ್.ಸಿ.

ಕೃಷಿ ಸಚಿವರು

ಅ) ಸರ್ಕಾರದಿಂದ ಇತ್ತೀಚೆಗೆ ನಿಗದಿಪಡಿಸಿರುವ ಚೈನಾ ಪ್ರವಾಸಕ್ಕೆ ರಾಜ್ಯದಿಂದ ಎಷ್ಟು ಜನ ಪ್ರಗತಿಪರ ರೈತರನ್ನು ಕಳುಹಿಸಿಕೊಡಲಾಗುವುದು; ಈ ರೈತ ಪ್ರತಿನಿಧಿಗಳ ಆಯ್ಕೆಗೆ ನಿಗದಿಪಡಿಸಿರುವ ಮಾನದಂಡವೇನು;

ರಾಜ್ಯದಿಂದ ಸುಮಾರು 1000 ಪ್ರಗತಿಪರ ರೈತರನ್ನು ರೈತರ ಅಧ್ಯಯನ ಪ್ರವಾಸಕ್ಕೆ ವಿದೇಶಕ್ಕೆ ಕಳುಹಿಸಲು ಯೋಜಿಸಲಾಗಿದೆ. ಅದರಲ್ಲಿ 524 ಜನ ರೈತರನ್ನು ಚೀನಾ ದೇಶಕ್ಕೆ ಈಗಾಗಲೇ ಕಳುಹಿಸಿ ಕೊಡಲಾಗಿದೆ. ಜಮೀನು ಹೊಂದಿದ್ದ ಸ್ವಯಂ ವ್ಯವಸಾಯ ಮಾಡುತ್ತಿರುವ ರೈತರನ್ನು ಆಯ್ಕೆ ಮಾಡಲಾಗುತ್ತಿದೆ.

ಆ) ಈ ರೈತ ಪ್ರತಿನಿಧಿಗಳಿಗೆ ಪ್ರತಿಯೊಬ್ಬರಿಗೂ ತಗಲುವ ವೆಚ್ಚವೆಷ್ಟು ಹಾಗೂ ಈ ರೈತರಿಗೆ ಪ್ರವಾಸದಲ್ಲಿ ಯಾವ ರೀತಿಯ ಸೌಲಭ್ಯಗಳನ್ನು ಒದಗಿಸಲಾಗುವುದು;

ಚೈನಾ ಪ್ರವಾಸಕ್ಕೆ ಪ್ರತಿಯೊಬ್ಬ ರೈತನಿಗೆ ತಗಲುವ ವೆಚ್ಚ ರೂ.67950/– ಗಳಾಗಿರುತ್ತದೆ.

ಈ ರೈತರಿಗೆ ಪ್ರವಾಸದಲ್ಲಿ ಪ್ರಯಾಣ, ವಸತಿ ಮತ್ತು ಊಟದ ಸೌಲಭ್ಯಗಳನ್ನು ಒದಗಿಸಲಾಗುವುದು.

ಇ) ಯಾವಾಗ, ಈ ರೈತರನ್ನು ಚೈನಾ ಪ್ರವಾಸಕ್ಕೆ ಕಳುಹಿಸಕೊಡಲಾಗುವುದು?

ರೈತರನ್ನು ಚೈನಾ ಪ್ರವಾಸಕ್ಕೆ ಡಿಸೆಂಬರ್ 2008 ರಿಂದ ಕಳುಹಿಸಿಕೊಡಲಾಗುತ್ತಿದೆ.

ಕೃತೋಇ/45/ಕೃಉಇ/2009

ಕರ್ನಾಟಕ ವಿಧಾನ ಸಭೆ

136 ಶ್ರೀ ಬಾಲಕೃಷ್ಣ ಹೆಚ್.ಸಿ

ಅ) ಬೆಂಗಳೂರು ನಗರದ ಮೈಸೂರು ರಸ್ತೆಯ ಬಾಪೂಜಿ ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ ನಡೆದಿರುವ ಅವ್ಯವಹಾರಗಳು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ, ಈ ಅವ್ಯವಹಾರ ಸ್ವರೂಪವನ್ನು ತಿಳಿಸುವುದು.

ಈ ಸಹಕಾರ ಸಂಘದಲ್ಲಿ ಕೆಳಕಂಡ ಅವ್ಯವಹಾರಗಳು ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

1. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 65ರಡಿಯಲ್ಲಿ ನಡೆಸಿದ ಪರಿವೀಕ್ಷಣೆಯಲ್ಲಿ ಸಂಘದ ಆಗಿನ ಅಧ್ಯಕ್ಷರಾದ ಶ್ರೀ ಡಿ.ರಾಜಕುಮಾರ್ ಹಾಗೂ ಉಪಾಧ್ಯಕ್ಷರಾಗಿದ್ದ ಶ್ರೀ ಎಂ.ವಿ.ರುದ್ರಾಚಾರಿ ಹಾಗೂ ಇತರೆ ಆಡಳಿತ ಮಂಡಳಿ ಸದಸ್ಯರುಗಳ ರೂ.459.69ಲಕ್ಷಗಳನ್ನು ದುರುಪಯೋಗಪಡಿಸಿಕೊಂಡಿರುವುದು.

2. ಸಂಘದ 1998–99 ಮತ್ತು 1999–2000ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ಸಂಘದ ಆಗಿನ ಪದಾಧಿಕಾರಿಗಳು ಹಾಗೂ ಆಡಳಿತ ಮಂಡಳಿ ಸದಸ್ಯರುಗಳು ರೂ.1,90,14,213/– ಗಳ ಹಣ ದುರುಪಯೋಗಪಡಿಸಿಕೊಂಡಿರುವುದು.

3. ಹಿರಿಯ ಸದಸ್ಯರುಗಳ ಜೇಷ್ಠತೆಯನ್ನು ಕಡೆಗಣಿಸಿ ಕಿರಿಯ ಸದಸ್ಯರಿಗೆ ನಿವೇಶನಗಳನ್ನು ಹಂಚಿರುವುದು.

4. ಸಂಘದ ಆಗಿನ ಅಧ್ಯಕ್ಷರಾದಂತಹ ಶ್ರೀ ಡಿ.ರಾಜ್‌ಕುಮಾರ್‌ರವರು ಕೆಂಗೇರಿ ಗ್ರಾಮಕ್ಕೆ ಸೇರಿದ ಸಂಘದ ಹೆಸರಿಗೆ ಜಿ.ಪಿ.ಎ. ಆಗಿರುವ 3.07 ಜಮೀನನ್ನು ಅಕ್ರಮವಾಗಿ ಮಾರಾಟ ಮಾಡಿ ಅವ್ಯವಹಾರ ಮಾಡಿರುವುದು.